

GENERATION Y

ತಮ್ಮನ್ನು ತಾವು ಸಕಲ ಕಲಾವಲ್ಲಭರೆಂದೇ ನಂಬಿಕೊಂಡ ಮಿಲೇನಿಯಲ್‌ಗಳ ಮನಸ್ಸನ್ನು ಸ್ಥಿಮಿತದಲ್ಲಿಡಲು ಬಹುತೇಕ ಅಭಿವೃದ್ಧಿ ಹೊಂದಿದ ದೇಶಗಳ ಮಾನವ ಸಂಪನ್ಮೂಲ ವಿಭಾಗಗಳೂ ತಲೆಕೆಡಿಸಿಕೊಂಡಿವೆ. 'ಸೋಷಿಯಲ್ ಜನರೇಷನ್' ಎಂದು ಕರೆಸಿಕೊಳ್ಳುವ ಈ ಪೀಳಿಗೆ ಸಾಮಾಜಿಕ ಜಾಲಗಳನ್ನು ನೋಡುತ್ತಲೇ ತಮ್ಮ ಹರೆಯ ಕಳೆದವರು. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟ್ಟರ್ ಮೊದಲಾದ ಸಾಮಾಜಿಕ ಜಾಲತಾಣಗಳನ್ನು ವಿಪರೀತ ಹಚ್ಚಿಕೊಂಡ ಇವರಲ್ಲಿ ನಗರ ಪ್ರದೇಶಗಳ ಜನರೇ ಹೆಚ್ಚು. ಅಂಥವರಿಗೆ ಹಳ್ಳಿ ಬದುಕೆಂದರೆ ಅಷ್ಟಕ್ಕಷ್ಟೆ. ವ್ಯೋಮಲೋಕದ ಕಾಣದ ಸ್ನೇಹಿತ–ಸ್ನೇಹಿತೆಯರ ಜತೆ ಸಂವಾದದಲ್ಲಿ ಮೈಮರೆಯುವ ಇವರಲ್ಲಿ ಎಷ್ಟೋ ಮಂದಿಗೆ ಭೌತಿಕ ಭಾವುಕ ಚರ್ಚೆಗಳು ಇಷ್ಟವಾಗದು. ಇವರ ಮನಸ್ಸಿನ ಹಂಬಲವೂ ಕಾಣದ ಕಡಲೇ ಹೌದು.

## ಇವರು ಹೀಗೇಕೆ..

ಅಮೆರಿಕದ ದಕ್ಷಿಣ ಕೆರೊಲಿನಾದ ಚಾರ್ಲ್ಸ್‌ಟನ್ ರಿಯಲ್ ಎಸ್ಟೇಟ್ ಕಂಪನಿ ಸೇರಿದ ಸ್ಟೀವನ್ ಕ್ಲಾರ್ಕ್ ಎಂಬ ಯುವಕ 2014ರಲ್ಲಿ ಹೀಗೆಂದಿದ್ದ: 'ಮುಂದಿನ ವರ್ಷದೊಳಗೆ ನಮ್ಮ ಕಂಪನಿ ಕೋಟಿಗಟ್ಟಲೆ ಡಾಲರ್ ಲಾಭ ಮಾಡಲಿದೆ'. ಕಚೇರಿಯ ಸಭೆಯಲ್ಲಿ ಅವನ ಮಾತು ಕೇಳಿ 'ಬೇಬಿ ಬೂಮರ್ಸ್' ಒಂದು ಕ್ಷಣ ಅವಾಕ್ಕಾಗಿದ್ದರು. ಕ್ಲಾರ್ಕ್‌ನ ಓರಗೆಯವರಿಗೆ ಅಚ್ಚರಿಯೇನೂ ಆಗಿರಲಿಲ್ಲ. ಅವರು ಹಣ ಮಾಡಿದರೂ ಮಾಡಬಹುದು ಎಂಬ ನಿರೀಕ್ಷೆಯ ನೋಟವನ್ನಷ್ಟೇ ಬೀರಿದ್ದರು. ಅಮೆರಿಕದಲ್ಲಿ ಮಿಲೇನಿಯಲ್‌ಗಳ ಸಂಖ್ಯೆ ಏಳೂವರೆ ಕೋಟಿಗೂ ಹೆಚ್ಚು. 'ಬೇಬಿ ಬೂಮರ್ಸ್' ಸುಮಾರು 7 ಕೋಟಿ 90 ಲಕ್ಷ. ಐದು ಕೋಟಿ ಚಿಲ್ಲರೆ ಇರುವ 'ಎಕ್ಸ್' ಜನರೇಷನ್‌ನವರಿಗೆ ಕ್ಲಾರ್ಕ್ ಆಡಿದಂಥ ಮಾತು ಸವಾಲಾಗಿ ಕೇಳಿಸಿರುತ್ತದೆ. ಬಿಸಿರಕ್ತದ ಈ ಹುಡುಗರು 'ಅಷ್ಟು ಲಾಭ ತರಬಹುದು, ಇಷ್ಟು ಲಾಭ ತರಬಹುದು' ಎಂದು ಮುನ್ನುಗ್ಗಿದರೆ, ವಯಸ್ಸಾಗುತ್ತಾ ಇರುವ ತಾವು ಹಿಂದುಳಿಯಬೇಕಾದೀತಲ್ಲ ಎನ್ನುವ ಆತಂಕ ಅವರದ್ದು.

'ಎಚ್‌ಆರ್4ಚೇಂಜ್' ಎಂಬ ಅಮೆರಿಕದ ಕಂಪನಿಯ ಸಂಸ್ಥಾಪಕ ಟೋನಿ ದೇಬ್ಲಾ, 'ಮೂರೂ ತಲೆಮಾರುಗಳು ಒಟ್ಟಿಗೆ ಕೆಲಸ ಮಾಡುತ್ತಿರುವುದನ್ನು ನಾವು ಈಗಷ್ಟೇ ನೋಡುತ್ತಿದ್ದೇವೆ. ಸಿದ್ಧಾಂತಗಳ ತಾಕಲಾಟ ಇಂಥ ಸಂದರ್ಭದಲ್ಲಿ ಹೆಚ್ಚು. ಇದರಿಂದಾಗಿ ಕಚೇರಿಗಳಲ್ಲಿ ಗೊಂದಲ ಮೂಡುವ ಸಾಧ್ಯತೆ ಹೆಚ್ಚು' ಎಂದು ಸಿಲಿಕಾನ್ ಸಿಟಿಯಲ್ಲಿನ ತಮ್ಮ ಕಂಪನಿಯ ಭವಿಷ್ಯದ ಕುರಿತು ಅವರು ಆತಂಕ ವ್ಯಕ್ತಪಡಿಸಿದ್ದರು.

ಕ್ಲಾರ್ಕ್ ವಿಶ್ವವಿದ್ಯಾಲಯದ ಪ್ರೊಫೆಸರ್ ಜೇಫ್ರಿ ಜೆನ್ಸನ್ ಆರ್ನೆಟ್ 'ವೆನ್ ವಿಲ್ ಮೈ ಗ್ರೋನ್‌ಅಪ್ ಕಿಡ್ ಗ್ರೋ ಅಪ್' ಎಂಬ ಮಜವಾದ ಶೀರ್ಷಿಕೆಯ ಪುಸ್ತಕ ಬರೆದರು. ಮಿಲೇನಿಯಲ್‌ಗಳ ಕುರಿತು ಉಳಿದೆರಡು ಪೀಳಿಗೆಯವರಿಗೆ ವಿಪರೀತ ಅಸಹನೆ ಇದೆ ಎಂದು ಸಂಶೋಧನೆ ನಡೆಸಿಯೇ ಅವರು ಆ ಕೃತಿಯನ್ನು ಬರೆದಿದ್ದರು. ಮಾಧ್ಯಮಗಳು ಕೂಡ ಹೊಸ ಸಹಸ್ರಮಾನದ ಪೀಳಿಗೆಯ ಅಪದ್ಧ ಮನಸ್ಥಿತಿಯನ್ನು ಕೇಂದ್ರೀಕರಿಸಿಯೇ ಹೆಚ್ಚು ಲೇಖನಗಳನ್ನು ಪ್ರಕಟಿಸಿರುವುದಾಗಿಯೂ ಅವರು ಉಲ್ಲೇಖಿಸಿದ್ದರು.

'ಜರ್ನಲ್ ಆಫ್ ಪರ್ಸನಾಲಿಟಿ ಅಂಡ್ ಸೋಷಿಯಲ್ ಸೈಕಾಲಜಿ' ನಾಲ್ಕು ವರ್ಷಗಳ ಹಿಂದೆಯೇ ಅಮೆರಿಕದ ಹೈಸ್ಕೂಲುಗಳ 90 ಲಕ್ಷ ವಿದ್ಯಾರ್ಥಿಗಳ ಸಮೀಕ್ಷೆ ನಡೆಸಿತ್ತು. ಮಿಲೇನಿಯಲ್‌ಗಳಲ್ಲಿ ಬಹುಪಾಲು ಲೋಲುಪರು, ರಾಜಕೀಯವಾಗಿ ತೊಡಗಿಕೊಳ್ಳದವರು, ಉಳಿದವರಿಗೆ ಸಹಾಯ ಮಾಡುವ ಬಗೆಗೆ ಎಳ್ಳಷ್ಟೂ ಯೋಚಿಸದವರು ಎಂಬ ಅಭಿಪ್ರಾಯಗಳನ್ನು ಅದು ಸಮೀಕ್ಷಾ ವರದಿಯಲ್ಲಿ ಪ್ರಕಟಿಸಿತ್ತು. ಬೇಬಿ ಬೂಮರ್ಸ್ ಹಾಗೂ 'ಎಕ್ಸ್' ಪೀಳಿಗೆಯವರು ಹೊಸ ಪೀಳಿಗೆಯ ವಯಸ್ಸಿನಲ್ಲಿ ಇದ್ದಾಗ ಈ ರೀತಿ ಯೋಚಿಸದೇ ಇರಲು ತಾವು ಅನುಭವಿಸಿದ ಸಾಮಾಜಿಕ ಕಷ್ಟಗಳೂ ಕಾರಣವಾಗಿದ್ದವು ಎಂದಿತ್ತು. ಇದು ಬಹುತೇಕ ದೇಶಗಳ ಮಟ್ಟಿಗೆ ಮೇಲುನೋಟಕ್ಕೆ ಸತ್ಯವೆನ್ನಿಸಬಹುದು.

ಟ್ವೆಂಜ್ ಎಂಬ ಮಹಿಳೆ ಕೂಡ ಕಾಲೇಜು ವಿದ್ಯಾರ್ಥಿಗಳನ್ನು ಒಂದು ಸಮೀಕ್ಷೆಗೆ ಒಳಪಡಿಸಿದ್ದರು. ಕೆಲವು ಸಿದ್ಧ ಪ್ರಶ್ನೆಗಳನ್ನು ನೀಡಿ ಉತ್ತರಿಸುವಂತೆ ಕೇಳಿಕೊಂಡಿದ್ದರು. ಒಂದು ವಸ್ತುವಿಷಯ ಕೊಟ್ಟು ಸಣ್ಣದೊಂದು ಪ್ರಬಂಧ ಬರೆಯಲು ಸೂಚಿಸಿದ್ದರು. 'ಆತ್ಮವಿಶ್ವಾಸ, ಧಾರ್ಷ್ಟ್ಯದಲ್ಲಿ ಸದಾ ಮುಂದೆನಿಸುವ ಈ ಪೀಳಿಗೆ ಆಂತರಿಕವಾಗಿ ದುಃಖಾರ್ತವಾಗಿದೆ' ಎಂಬ ಕುತೂಹಲಕಾರಿ ಅಂಶವನ್ನು ಅವರು ತಿಳಿಸಿದ್ದರು. ಅಷ್ಟೇ ಅಲ್ಲದೆ, ಸಿಂಹಪಾಲು ವಿದ್ಯಾರ್ಥಿಗಳ ಪ್ರಬಂಧಗಳು 'ನಾನು', 'ನನ್ನದು' ಎಂಬ ಸ್ವಾರ್ಥಚಿಂತನೆಗಳಿಂದಲೇ ಕೂಡಿದ್ದವೆಂದೂ ಹೇಳಿದ್ದರು.

ಅಮೆರಿಕದ ಡಲ್ಲಾಸ್‌ನ ಮನೋವಿಜ್ಞಾನಿ ಶೆರ್ರಿ ಬಫಿಂಗ್ ಟನ್ 'ಎಕ್ಸಿಟಿಂಗ್ ಓಜ್' ಎಂಬ ಕೃತಿಯ ಸಹ ಲೇಖಕರೂ ಹೌದು. ಹೊಸ ಪೀಳಿಗೆಯ ಕಡಿಮೆ ವೃತ್ತಿಪರತೆ, ಮುಕ್ಕಾದ ಸೃಜನಶೀಲತೆ, ಒಳನೋಟಗಳಿಲ್ಲದ ಮಾತುಕತೆ, ಸಮಸ್ಯೆ ಉದ್ಭವಿಸಿದಾಗ ಪರಿಹರಿಸುವ ದಾರಿ ಹುಡುಕದ ಮನಸ್ಥಿತಿ ಇವೆಲ್ಲವುಗಳನ್ನು ಕೇಂದ್ರೀಕರಿಸಿ ಅವರು ಕಂಪನಿಗಳ ಮಾನವ ಸಂಪನ್ಮೂಲ ವಿಭಾಗಗಳಿಗೇ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ರಚಿಸಿಕೊಟ್ಟಿದ್ದರು. ಇದಕ್ಕಾಗಿ ಅವರು 400 ಕಂಪನಿಗಳ ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕರ ಜತೆ ಚರ್ಚಿಸಿದ್ದರು. 'ಬಹುತೇಕ ಕಂಪನಿಗಳ ವ್ಯವಸ್ಥಾಪಕರಿಗೆ